FA/706266

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2691 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ಸಚಿವರು | : | ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 25-03-2022 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಐಷಾರಾಮಿ ಕಾರುಗಳಿಗೆ ಜೀವಿತಾವಧಿ ತೆರಿಗೆ ಪಾವತಿಸಿ ಕೊಳ್ಳದೆ ರಾಜ್ಯದ ವಿವಿಧ ಆರ್.ಟಿ.ಒ. ಗಳಲ್ಲಿ ನೂರಾರು ಕೋಟಿ ರೂ.ಗಳ ಹೆಚ್ಚು ತೆರಿಗೆ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ರಾಜ್ಯದ ಕೆಲವೊಂದು ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಕೆಲವೊಂದು ಐಷಾರಾಮಿ ಕಾರುಗಳಿಗೆ ಜೀವಾವಧಿ ತೆರಿಗೆ ಪಾವತಿಸಿಕೊಳ್ಳದೆ ನೋಂದಣಿ ಮಾಡಿ ಸರ್ಕಾರಕ್ಕೆ ತೆರಿಗೆ ನಷ್ಟ ಉಂಟು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ. | ಬಂದಿದಲ್ಲಿ, ಈ ಹಗರಣ ಎಷ್ಟು ವರ್ಷಗಳಿಂದ ನಡೆದುಕೊಂಡು ಬಂದಿದೆ; ಸರ್ಕಾರಕ್ಕೆ ಈ ಐಷಾರಾಮಿ ಕಾರುಗಳು ಜೀವಿತಾವಧಿ ತೆರಿಗೆಯಿಂದ ಉಂಟಾಗಿರುವ ನಷ್ಟವೆಷ್ಟು? (ವಿವರವಾದ ಮಾಹಿತಿ ಒದಗಿಸುವುದು) | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಕೇಂದ್ರ) ಇಲ್ಲಿ ಐಷಾರಾಮಿ ಕಾರುಗಳು ತೆರಿಗೆ ಪಾವತಿಸದೇ ನೋಂದಣಿ ಯಾಗಿರುವ ಮಾಹಿತಿಯನ್ನಾಧರಿಸಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ನೇತೃತ್ವದಲ್ಲಿ ಅಧಿಕಾರಿ/ಸಿಬ್ಬಂದಿಗಳ ನ್ನೊಳ ಗೊಂಡ ತನಿಖಾ ತಂಡವನ್ನು ರಚಿಸಿ ದಿನಾಂಕ:1-4-2015 ರಿಂದ 30-11-2021ರ ಅವಧಿಯಲ್ಲಿ ಸದರಿ ಕಛೇರಿಯಲ್ಲಿ ತೆರಿಗೆ ಪಾವತಿಸದೆ ನೋಂದಣಿಯಾದ ವಾಹನಗಳ ಕುರಿತು ತನಿಖೆ ಮಾಡಿ ವರದಿ ಸಲ್ಲಿಸಲು ಆದೇಶ ಮಾಡಿದ್ದು, ತನಿಖಾ ತಂಡವು ದಿನಾಂಕ:01-04-2015 ರಿಂದ 30-11-2021ರ ಅವಧಿಯಲ್ಲಿ ನೋಂದಾಯಿಸಲಾದ ರೂ.20 ಲಕ್ಷಕ್ಕೂ ಮೇಲ್ಪಟ್ಟ ಬೆಲೆಯ ವಾಹನಗಳ ಪರಿಶೀಲನೆ ಮಾಡಿ ಕೆಲವೊಂದು ವಾಹನಗಳು ತೆರಿಗೆ ಪಾವತಿಸದೆ ನೋಂದಣಿ ಯಾಗಿರುವುದಾಗಿ ವರದಿ ನೀಡಿದ್ದು, ತೆರಿಗೆ ಪಾವತಿಸದೆ ನೋಂದಣಿಯಾದ ವಾಹನಗಳ ಕಡತಗಳು ನಾಪತ್ತೆಯಾಗಿ ರುವುದಾಗಿ ವರದಿ ಸಲ್ಲಿಸಿರುತ್ತಾರೆ. ಕಡತಗಳು ನಾಪತ್ತೆಯಾಗಿರು ವುದರಿಂದ ತೆರಿಗೆ ನಷ್ಟದ ನಿಖರವಾದ ಮಾಹಿತಿ ಲಭ್ಯವಾಗಿರುವುದಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ಉನ್ನತ ಮಟ್ಟದ ತನಿಖೆ ಕೈಗೊಳ್ಳಲಾಗುವುದು. ತನಿಖೆ ನಂತರ ನಷ್ಟದ ಸಂಪೂರ್ಣ ಮಾಹಿತಿ ಲಭ್ಯವಾಗುವುದು. |
| ಇ. | ಈ ಅಕ್ರಮದಲ್ಲಿ ಆರ್.ಟಿ.ಒ. ಅಧಿಕಾರಿಗಳು/ ಸಿಬ್ಬಂದಿಗಳು ಭಾಗಿ ಯಾಗಿರುವುದು ಈಗಾಗಲೇ ತನಿಖೆ ಯಿಂದ ದೃಢಪಟ್ಟಿರುವುದರಿಂದ | ತೆರಿಗೆ ಪಾವತಿಸಿಕೊಳ್ಳದೆ ವಾಹನಗಳ ನೋಂದಣಿ ಮಾಡಿರುವ ಪ್ರಕರಣಗಳ ಕುರಿತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ನೇತೃತ್ವದಲ್ಲಿ ತಂಡವನ್ನು ರಚಿಸಿ ವಿಚಾರಣೆಯನ್ನು |



Generated from eOffice by B SREERAMULU, TD-MIN(BS), TRANSPORT MINISTER, Trans on 24/03/2022 03:46 PM

DFA/70

| | | |
|---|---|---|
| | ಇವರುಗಳ ಮೇಲೆ ಕ್ರಿಮಿನಲ್ ಕೇಸ್ ಹೂಡಲಾಗಿದೆಯೇ? ಇದ್ದಲ್ಲಿ ಈ ಅಧಿಕಾರಿ/ನೌಕರರ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? | ಕೈಗೊಂಡಿದ್ದು ವಿಚಾರಣಾ ತಂಡವು ಪ್ರಾಥಮಿಕ ವರದಿ ನೀಡಿದ್ದು, ವರದಿಯನ್ನು ಪರಿಶೀಲನೆ ಮಾಡಲಾಗಿ, ತೆರಿಗೆ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಉನ್ನತ ಮಟ್ಟದ ದೀರ್ಘ ವಿಚಾರಣೆಯ ಅವಶ್ಯಕತೆ ಇರುವುದು ಕಂಡುಬಂದಿದ್ದರಿಂದ ಪ್ರಕರಣಕ್ಕೆ ಸಂಬಂಧಿಸಿದಂತೆ ಉನ್ನತ ಮಟ್ಟದ ತನಿಖೆ ಕೈಗೊಳ್ಳಲಾಗುವುದು. ತನಿಖೆ ಪೂರ್ಣಗೊಂಡು ಅಂತಿಮ ವರದಿ ಸಲ್ಲಿಸಿದ ನಂತರ ತಪ್ಪಿತಸ್ಥ ಅಧಿಕಾರಿ/ ಸಿಬ್ಬಂದಿಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು. |
| ಈ. | ಭಾಗಿಯಾದ ಅಧಿಕಾರಿ/ ಸಿಬ್ಬಂದಿ ಯವರು ಅಕ್ರಮವೆಸಗಿರುವುದು ತನಿಖೆಯಿಂದ ಸಾಬೀತಾಗಿರುವುದ ರಿಂದ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವ ಹಣವನ್ನು ಇವರಿಂದ ವಸೂಲಾತಿ ಮಾಡಲು ಕೈಗೊಂಡಿರುವ ಕ್ರಮಗಳೇನು? (ವಿವರವಾದ ಮಾಹಿತಿ ನೀಡುವುದು) | ತೆರಿಗೆ ವಂಚನೆ ಪ್ರಕರಣದ ವಿಚಾರಣೆಯ ಅಂತಿಮ ವರದಿ ಬಂದ ನಂತರದಲ್ಲಿ ತಪ್ಪಿತಸ್ಥ ಅಧಿಕಾರಿ/ ಸಿಬ್ಬಂದಿಗಳಿಂದ ಸರ್ಕಾರಕ್ಕೆ ಉಂಟಾದ ತೆರಿಗೆ ನಷ್ಟದ ಮೊತ್ತವನ್ನು ವಸೂಲು ಮಾಡುವ ಕುರಿತು ಕ್ರಮ ಜರುಗಿಸಲಾಗುವುದು. |

ಟಿಡಿ 63 ಟಿಡಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ
ಪಂಗಡಗಳ ಕಲ್ಯಾಣ ಸಚಿವರು



Generated from eOffice by B SREERAMULU, TD-MIN(BS), TRANSPORT MINISTER, Trans on 24/03/2022 03:46 PM